**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 4604/2021 ಸಿ.ಡಬ್ಲ್ಯೂ –04 ಪಿ.ಡಬ್ಲ್ಯೂ -02

| | | |
|---|---|---|
| ಹೆಸರು | ಃ | ಕಮಲಾಕರ |
| ತಂದೆಃ ಗಂಡ | ಃ | ರೇವಪ್ಪ |
| ವಯಸ್ಸು | ಃ | ೬೦ ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಖಜೂರಿ |

ದಿನಾಂಕಃ ೨೦.೦೨.೨೦೨೪

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ ಅವರಿಂದ ಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-೧ ನನ್ನ ಪತ್ನಿ, ಚಾಸಾ-2, 3, 5 ರಿಂದ 8 ರವರ ಪರಿಚಯ ಇರುತ್ತದೆ.

ಬೆಳಿಗ್ಗೆ 6.00 ಗಂಟೆಗೆ ಚಾಸಾ-೧ ಅಂಗಳ ಕಸ ಗುಡಿಸುತ್ತಿರುವಾಗ ಆರೋಪಿ ನಂ.೧ ಏ ರಂಡಿ ಎಂದು ಅವಾಚ್ಯವಾಗಿ ಬೈದು ನಿನ್ನ ಗಂಡ ಜಮೀನಿನ ವಿಷಯವಾಗಿ ನಮ್ಮ ತಂಟೆಗೆ ಬಂದರೆ ಹೊಡೆಯುತ್ತೇನೆ ಅವನನ್ನು ಎಂದು ಹೇಳಿ, ತಲೆಯ ತುರುಬವನ್ನು ಹಿಡಿದು ಎಳೆದು ಕೆಳಗೆ ಹಾಕಿ ಎದೆಯ ಮೇಲೆ ಕುಂತು ಕಪಾಳಕ್ಕೆ ಹೊಡೆದಿರುತ್ತಾನೆ. ಆಗ ನಾನು ಬಂದು ಬಿಡಿಸಲು ಹೋದಾಗ ಚಾಸಾ-೧ ರವರನ್ನು ಹೊಡೆಯುವುದನ್ನು ಬಿಟ್ಟು ನನಗೆ ಕಟ್ಟಿಗೆಯಿಂದ ಬೆನ್ನ ಮೇಲೆ ಹೊಡೆದಿರುತ್ತಾನೆ. ಚಾಸಾ-6 ರಿಂದ 8 ರವರು ಜಗಳವನ್ನು ಬಿಡಿಸಿರುತ್ತಾರೆ. ಆರೊಪಿ ನಂ.೧, ೪, ೫ ರವರು ಚಾಸಾ-6 ರಿಂದ 8 ರವರು ಬಿಡಿಸಿದರೂ ನನಗೆ ಹೊಡೆದಿರುತ್ತಾರೆ. ಆರೊಪಿ ನಂ.೨ ಕಟ್ಟಿಗೆಯಿಂದ ಟೊಂಕಕ್ಕೆ ಬಹಳ ಹೊಡೆದಿರುತ್ತಾನೆ. ನಂತರ ನಾನು ಆಸ್ಪತ್ರೆಗೆ ಹೋಗಿರುತ್ತೇನೆ, ಅಲ್ಲಿ ಪೋಲಿಸರು ಬಂದು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿ ಮು.ಮಾ-೧ ಮತ್ತು ೨ನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ. 03.05.2021 ರಂದು ಬೆಳಿಗ್ಗೆ 6.30 ಗಂಟೆಗೆ ಘಟನೆ ನಡೆದಿರುತ್ತದೆ ಎಂಧರೆ ಸರಿ. ಆರೊಪಿತರು ಇನ್ನೊಮ್ಮೆ ನಮ್ಮ ತಂಟೆಗೆ ಬಂದರೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ

ಹಾಕಿರುತ್ತಾರೆ ಎಂಧರೆ ಸರಿ. ಈಗಲೂ ಸಹ ಕೂಡ ನ್ಯಾಯಾಲಯಕ್ಕೆ ಬಂದರೆ ಜೀವ ಸಹಿತ ಬಿಡುವುದಿಲ್ಲ ಎಂದು ಹೇಳುತ್ತಿರುತ್ತಾರೆ.

**<u>ಪಾಟೀ ಸವಾಲು ಆರೋಪಿ</u>** <u>ನಂ.೧ ರಿಂದ ೪ರವರ</u> **<u>ಪ</u>**<u>ರ ಶ್ರೀ ಸಿ.ಎನ್.ಟಿ.</u> **<u>ವಕೀಲರಿಂದ</u>**

ಆರೋಪಿ ನಂ.೧ ನನ್ನ ಖಾಸಾ ಸಹೋದರ. ಪೋಲಿಸರು ಘಟನೆ ಆದ ಮರುದಿನ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಆರೊಪಿ ನಂ.೧ ಮತ್ತು ನನ್ನ ಜಮೀನು ಅಕ್ಕಪಕ್ಕದ ಜಮೀನು ಎಂದರೆ ಸರಿ. ಆರೋಪಿತರು ಮತ್ತು ನಮ್ಮದು ಬಂದಾರಿಯ ಸಲುವಾಗಿ ವೈಮನಸ್ಸಿದೆ ಎಂದರೆ ಸರಿ ಅಲ್ಲ. ನಾವು ನಮ್ಮ ಜಮೀನನ್ನು ನ್ಯಾಯಾಲಯದ ಆದೇಶದ ಮೂಲಕ ಪಾಲು ವಾಟ್ನಿ ಮಾಡಿಕೊಂಡಿರುತ್ತೇವೆ. ಅಸಲು ದಾವಾ ನಂ.೫೧೦/೧೯೯೨ ರಲ್ಲಿ ಕಾಂಪ್ರಮೈಸ್ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ಪಾಲು ವಾಟ್ನಿಯಲ್ಲಿ ನಮಗೆ ೧೨ ಎಕರೆ ಜಮೀನು ಬಂದಿರುತ್ತದೆ ಎಂದರೆ ಸರಿ. ಆರೋಪಿ ನಂ.೧ ರವರಿಗೆ ೧೫ ಎ-೧೨ ಗುಂಟೆ ಬಂದಿರುತ್ತದೆ ಎಂಧರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಆರೋಪಿ ನಂ.೧ ಅವನ ಜಮಿನನ್ನು ಅವನು ಬಿತ್ತು ಬೆಳೆ ಮಾಡುತ್ತಾನೆ, ನನ್ನ ಜಮೀನನ್ನು ನಾನು ಬಿತ್ತು ಬೆಳೆ ಮಾಡುತ್ತೇನೆ ಎಂದರೆ ಸರಿ. ಆರೊಪಿ ನಂ.೧ ರವರ ಮೇಲೆ ದಬ್ಬಾಳಿಕೆ ಮಾಡಿ ೨೦೦೯ ರಲ್ಲಿ ನಾನು ೨ಎಕರೆ ಜಮೀನನ್ನು ಕಸಿದುಕೊಂಡಿರುತ್ತೇನೆ ಎಂಧರೆ ಸರಿ ಅಲ್ಲ. ಸದರಿ ೨ ಎಕರೆ ಜಮೀನು ಸಲುವಾಗಿ ಆರೋಪಿ ನಂ.೧ ನನ್ನ ಮೇಲೆ ದಾವೆ ಹೂಡಿದ್ದನು ಎಂದರೆ ಸರಿ ಅಲ್ಲ. ೨೦೦೯ ರಲ್ಲಿ ಆರೋಪಿ ನಂ.೧ ದಾವೆ ಹೂಡಿದ ಕಾರಣ ಅವರು ಮತ್ತು ನಮ್ಮ ನಡುವೆ ವೈಮನಸ್ಸಿದೆ ಎಂದರೆ ಸರಿ ಅಲ್ಲ. ಸದರಿ ದಾವೆ ನಂ. ೧೫೪/೨೦೦೯ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸದರಿ ೨ ಎಕರೆ ಜಮೀನನ್ನು ಕಸಿದುಕೊಂಡು ಮೂರು ವರ್ಷ ನಾನೇ ಅದರ ಬಿತ್ತು ಬೆಳೆ ಮಾಡಿ ಅದರ ಉತ್ಪನ್ನವನ್ನು ಪಡೆದುಕೊಂಡಿರುತ್ತೇನೆ ಎಂಧರೆ ಸರಿ ಅಲ್ಲ. ಸದರಿ ಓ.ಎಸ್. ನಂ ೧೫೪/೨೦೦೯ ಆದೇಶವು ಆರೋಪಿ ನಂ.೧ ರವರ ಪರವಾಗಿ ಆಗಿರುತ್ತದೆ ಎಂಧರೆ ಸರಿ, ಮುಂದುವರೆದು ಜಮೀನನ್ನು ಅಳೆಯಲು ಎಂದು ಹೇಳಿ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾವೆಯ ಆದೇಶವಾದ ನಂತರ ಸದರಿ ಜಮೀನಿನ ೨ಎಕರೆ ಜಮೀನನ್ನು ಕಬ್ಜಾ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ೨ಎಕರೆ ಜಮೀನನ್ನು ಮರಳಿ ಪಡೆದುಕೊಂಡರು ಎಂದು ಹೇಳಿ ವೈಮನಸ್ಸಿನಿಂದ ಚಾಸಾ-೧ ರವರ ಮೂಲಕ ಫಿರ್ಯಾದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿತರು ಜಮೀನನ್ನು ಬಿತ್ತು ಬೆಳೆ ಮಾಡಿ ಒಳ್ಳೆ ಉತ್ಪನವನ್ನುಪಡೆದುಕೊಳ್ಳುತ್ತಾರೆ ಎಂಬ ಹೊಟ್ಟೆ ಕಿಚ್ಚಿನಿಂದ ಚಾಸಾ-೧ ರವರ ಮೂಲಕ ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ ಎಂಧರೆ ಸರಿ ಅಲ್ಲ.

ನಾನು ನನ್ನ ಹೇಳಿಕೆಯಲ್ಲಿ ಆರೋಪಿತರು ಜೆ.ಸಿ.ಬಿ.ಯಿಂದ ಬಂದಾರಿ ಒಡೆದಿರುತ್ತಾರೆ ಎಂದು ಹೇಳಿ ಸುಳ್ಳು ಹೇಳಿಕೆ ನೀಡಿರುತ್ತೇನೆ ಎಂಧರೆ ಸರಿ ಅಲ್ಲ. ಆರೊಪಿ ನಂ.೨ ಚಾಸಾ-೧ ರವರಿಗೆ ಕೈಯಿಂದ ಕಪಾಳದ ಮೇಲೆ ಹೊಡೆದಿರುತ್ತಾನೆ ಎಂದು ಹೇಳಿಕೆ ನೀಡಿರುತ್ತೇನೆ ಎಂಧರೆ ಸರಿ ಅಲ್ಲ. ಆರೋಪಿ ನಂ.೨ ಮತ್ತು ೩ ರವರು ಕಟ್ಟಿಗೆಯಿಂದ ಬೆನ್ನ ಮೇಲೆ ಹೊಡೆ ಬಡೆ ಮಾಡಿರುತ್ತಾರೆ ಎಂದು

ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿತರು ನನ್ನ ಜೀವ ಹೊಡೆಯುತ್ತೇವೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಚಾಸಾ-6 ರಿಂದ 8 ರವರು ಜಗಳವನ್ನು ನೋಡಿ ಬಿಡಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿತರು ಮು.ಮಾ-೧ ಮತ್ತು ೨ ರಿಂದ ಹೊಡೆ ಬಡೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

**ಪಾಟೀ ಸವಾಲು ಆರೋಪಿ** ನಂ.೫ರ **ಪ** ರ ಶ್ರೀ ಡಿ.ಎಸ್.ಎನ್. **ವಕೀಲರಿಂದ**

ಆರೋಪಿ ನಂ.೫ ನನ್ನ ಸಹೋದರ ಎಂಧರೆ ಸರಿ. ಆರೋಪಿ ನಂ.೫ ರವರು ನನ್ನ ಮತ್ತು ಚಾಸಾ-೧ ರವರ ಮೇಲೆ ಓ.ಎಸ್. ೬೯/೨೦೧೮ನ್ನು ಹೂಡಿರುತ್ತಾರೆ ಎಂಧರೆ ಸರಿ. ಸದರಿ ದಾವೆಯನ್ನು ನಾವು ನನ್ನ ವಕೀಲರ ಮೂಲಕ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ. ನಮ್ಮ ಜಮೀನುಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಒಟ್ಟು ಮೂರು ಡಿಕ್ರಿಗಳು ಆಗಿರುತ್ತವೆ ಎಂದರೆ ಸಾಕ್ಷಿಯು ಒಂದೇ ಡಿಕ್ರಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಮೂರು ದಾವೆಗಳಲ್ಲಿ ಮೂರು ಡಿಕ್ರಿಗಳು ಆಗಿರುತ್ತವೆ, ಒಂದರಲ್ಲಿ ರಾಜಿಯಾಗಿರುತ್ತೇವೆ, ಇನ್ನು ಎರಡರಲ್ಲಿ ದಾವೆ ನಡೆದಿರುತ್ತದೆ ಎಂದರೆ ಸರಿ ಅಲ್ಲ. ಸದರಿ ದಾವೆಗಳನ್ನು ತೆಗೆಯಬೇಕು ಎನ್ನುವ ಉದ್ದೇಶದಿಂದ, ಮತ್ತು ಸದರಿ ದಾವೆಗಳಲ್ಲಿ ರಾಜಿ ಮಾಡಿಕೊಳುತ್ತಾರೆ ಎಂಬ ಕಾರಣಕ್ಕಾಗಿ ಈ ಪ್ರಕರಣ ದಾಖಲಿಸಿರುತ್ತೇನೆ ಎಂಧರೆ ಸರಿ ಅಲ್ಲ. ಸದರಿ ದಾವೆಯನ್ನು ಹೂಡಿದ ಕಾರಣ ಈ ಖೊಟ್ಟಿ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿ ಅಲ್ಲ. ಚಾಸಾ-೧ ರವರಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

ಬೆಳಿಗ್ಗೆ ೬.೦೦ ಗಂಟೆಗೆ ಚಾಸಾ-೧ ಅಂಗಳ ಕಸ ಗುಡಿಸುತ್ತಿರುವಾಗ ಆರೋಪಿ ನಂ.೧ ಏ ರಂಡಿ ಎಂದು ಅವಾಚ್ಯವಾಗಿ ಬೈದು ನಿನ್ನ ಗಂಡ ಜಮೀನಿನ ವಿಷಯವಾಗಿ ನಮ್ಮ ತಂಟೆಗೆ ಬಂದರೆ ಹೊಡೆಯುತ್ತೇನೆ ಅವನನ್ನು ಎಂದು ಹೇಳಿ, ತಲೆಯ ತುರುಬವನ್ನು ಹಿಡಿದು ಎಳೆದು ಕೆಳಗೆ ಹಾಕಿ ಎದೆಯ ಮೇಲೆ ಕುಂತು ಕಪಾಳಕ್ಕೆ ಹೊಡೆದಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆಗ ನಾನು ಬಂದು ಬಿಡಿಸಲು ಹೋದಾಗ ಚಾಸಾ-೧ ರವರನ್ನು ಹೊಡೆಯುವುದನ್ನು ಬಿಟ್ಟು ನನಗೆ ಕಟ್ಟಿಗೆಯಿಂದ ಬೆನ್ನ ಮೇಲೆ ಹೊಡೆದಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಚಾಸಾ-೬ ರಿಂದ ೮ ರವರು ಜಗಳವನ್ನು ಬಿಡಿಸಿರುತ್ತಾರೆ, ಆರೊಪಿ ನಂ.೧, ೪, ೫ ರವರು ಚಾಸಾ-೬ ರಿಂದ ೮ ರವರ ಬಿಡಿಸಿದರೂ ನನಗೆ ಹೊಡೆದಿರುತ್ತಾರೆ, ಆರೊಪಿ ನಂ.೨ ಕಟ್ಟಿಗೆಯಿಂದ ಟೊಂಕಕ್ಕೆ ಬಹಳ ಹೊಡೆದಿರುತ್ತಾನೆ, ನಂತರ ನಾನು ಆಸ್ಪತ್ರೆಗೆ ಹೋಗಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರುವಿಚಾರಣೆಃ- ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ